## 2 ನೇ  ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ ರಾಣೇಬೆನ್ನೂರು.

## ಕ್ರಿ.ಮಿಸ್.ನಂಬ್ರ: 261/2025

P.W -1

**ಸಾಕ್ಷಿದಾರರ ಹೆಸರು** : ಅಶ್ಮತ್ ಬಾನು ಹರಪನಹಳ್ಳಿ
**ಗಂಡನ ಹೆಸರು** : ಮಹಮ್ಮದ ಇಬ್ರಾಹಿಂ
**ವಯಸ್ಸು** : 39 ವರ್ಷ
**ಉದ್ಯೋಗ** : ಮನೆಗೆಲಸ
**ವಾಸ** : ರಾಣೆಬೆನ್ನೂರು

**ದಿನಾಂಕ: 13-01-2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆ : ಅರ್ಜಿದಾರರ ಪರ ವಕೀಲರಿಂದ**

ಎದುರುದಾರ ನನ್ನ ಗಂಡ. ಆತನ ವಿರುದ್ಧ ಜೀವನಾಂಶ ಕೋರಿ ಈ ಅರ್ಜಿ ಸಲ್ಲಿಸಿರುತ್ತೇನೆ. ನನ್ನ ಮತ್ತು ಎದುರುದಾರನ ಮದುವೆ ದಿನಾಂಕ 01-05-2011 ರಲ್ಲಿ ನಮ್ಮ ಸಂಪ್ರದಾಯದ ಪ್ರಕಾರ ಆಂಗ್ಲೋ ಉರ್ದು ಹೈಸ್ಕೂಲ್ ರಾಣೆಬೆನ್ನೂರಿನಲ್ಲಿ ಆಗಿರುತ್ತದೆ. ಮದುವೆಯ ಖರ್ಚನ್ನು ಸಂಪೂರ್ಣವಾಗಿ ನನ್ನ ತಂದೆ ತಾಯಿ ನೋಡಿಕೊಂಡಿರುತ್ತಾರೆ. ನಾನು ಮದುವೆಯಾದ ನಂತರ ಎದುರುದಾರನ ಮನೆಗೆ ವೈವಾಹಿಕ ಜೀವನಕ್ಕಾಗಿ ಹೋಗಿರುತ್ತೇನೆ. ನನಗೆ ಅಲ್ಲಿ ಹೆಚ್ಚಿನ ವರದಕ್ಷಿಣೆಗಾಗಿ ಬೇಡಿಕೆ ಇಟ್ಟಿದ್ದು ನಾನು ತರದೇ ಹೋದಲ್ಲಿ ನನ್ನ ಗಂಡನಿಗೆ ಮತ್ತೊಂದು ಮದುವೆ ಮಾಡುವುದಾಗಿ ಹೇಳುತ್ತಿದ್ದರು. ನನಗೆ ಮದುವೆಯಾದ ನಂತರ 3 ಜನ ಮಕ್ಕಳು ಜನಿಸಿದ್ದು ಅವರೆಂದರೆ, ಅಬ್ದುಲ್ ಸಾದಿಕ್ ವರ್ಷ 14, ಅಬ್ದುಲ್ ರಜಾಕ್ ವರ್ಷ 13, ಆಜಂ ವರ್ಷ 10. ಅವರೆಲ್ಲ ವಿದ್ಯಾರ್ಥಿಗಳಾಗಿರುತ್ತಾರೆ. ಅವರು ನನ್ನ ಜೊತೆ ವಾಸವಾಗಿರುತ್ತಾರೆ. ಮಕ್ಕಳ ಸಂಪೂರ್ಣ ಖರ್ಚು ವೆಚ್ಚ ಮತ್ತು ನೋಡಿಕೊಳ್ಳುವುದು ಸಂಪೂರ್ಣವಾಗಿ ನನ್ನ ತಂದೆ ನೋಡುತ್ತಾರೆ.

ಎದುರುದಾರನ ತಾಯಿ, ತಮ್ಮ, ತಂಗಿ ಮತ್ತು ತಂಗಿಯ ಗಂಡ ಎಲ್ಲರೂ ಮಿಲಾಪಿಯಾಗಿ ನನಗೆ ಚಿತ್ರಹಿಂಸೆ ಕೊಡುತ್ತಿದ್ದರು. ಸದ್ರಿಯವರು ನನಗೆ 40 ಸಾವಿರ, 1 ಲಕ್ಷ ತೆಗೆದುಕೊಂಡು ಬರಲು ನನಗೆ ಪೀಡಿಸುತ್ತಿದ್ದರು. ಹಣ ತರದೇ ಇದ್ದಲ್ಲಿ ನನಗೆ ವಿವಾಹ

ವಿಚ್ಛೇದನೆ ಕೊಟ್ಟು ಎದುರುದಾರನಿಗೆ ಬೇರೆ ವಿವಾಹ ಮಾಡುವುದಾಗಿ ಬೆದರಿಕೆ ಹಾಕುತ್ತಿದ್ದರು. ನನ್ನ ಮತ್ತು ನನ್ನ ಮಕ್ಕಳ ಖರ್ಚು ವೆಚ್ಚ ಯಾವುದೇ ರೀತಿಯಿಂದ ಎದುರುದಾರ ನೋಡಿಕೊಳ್ಳುತ್ತಿಲ್ಲ. ಎದುರುದಾರ ಕುಡಿದು ಬಂದು ತನ್ನ ಕೈಗೆ ಏನು ಸಿಗುತ್ತದೆ ಅದರಲ್ಲಿ ಹೊಡೆಬಡೆ ಮಾಡುತ್ತಿದ್ದ. ಕಾರಣ ತನಗೆ ಹಣ ಕೊಡದೇ ಹೋದಲ್ಲಿ ನಿನ್ನ ಜೊತೆ ಬಾಳ್ವೆ ಮಾಡುವುದಿಲ್ಲ ಅಂತ ಹೇಳುತ್ತಿದ್ದ. ನನ್ನ ಅತ್ತೆ ಯಾರು ಹೆಚ್ಚಿನ ವರದಕ್ಷಿಣೆ ಕೊಡುತ್ತಾರೆ ಅವರ ಮನೆಯಲ್ಲಿ ತನ್ನ ಮಗನ 2ನೇ ಮದುವೆ ಮಾಡುವುದಾಗಿ ಹೇಳುತ್ತಿದ್ದರು. ಸದ್ರಿ ತಾನು ಇನ್ನೊಂದು ಮದುವೆಯಾಗುತ್ತೇನೆ ನೀನು ಡಿವೋರ್ಸ ಕೊಡು ಎಂದು ಹೇಳುತ್ತಿದ್ದ.

ಇಲ್ಲಿಯತನಕ ನಾನು ಪ್ರತ್ಯೇಕವಾಗಿ ವಾಸವಾದ ನಂತರ ಎದುರುದಾರ ನನಗೆ ಯಾವುದೇ ಜೀವನಾಂಶ ಕೊಟ್ಟಿರುವುದಿಲ್ಲ. ನನಗೆ ಸ್ವತಃ ದುಡಿದು ನನ್ನನ್ನು ಮತ್ತು ಮಕ್ಕಳನ್ನು ಸಂರಕ್ಷಿಸಿಕೊಳ್ಳಲು ಸಾಧ್ಯವಿಲ್ಲ. ಎದುರುದಾರ ಸ್ವಂತ ಗ್ಯಾರೇಜ್ ಕೆಲಸ ಮಾಡುತ್ತಿದ್ದು ಅಲ್ಲಿ ದಿನಕ್ಕೆ ರೂ.10 ಸಾವಿರ ಸಂಬಳ ಬರುತ್ತದೆ. ನನ್ನ ತಂದೆ ಕಡೆಯಿಂದ ಎದುರುದಾರನಿಗೆ 6 ಬಾರಿ ಹಣವನ್ನು ತೆಗೆದುಕೊಂಡು ಹೋಗಿ ಕೊಟ್ಟಿರುತ್ತೇನೆ. ಸದ್ರಿ ಆ ಹಣದಿಂದ ಮನೆಬಳಕೆ ವಸ್ತುಗಳಾದ ವಾಷಿಂಗ್ ಮೆಷಿನ್, ಟಿವಿ, ಫ್ರಿಡ್ಜ ಖರೀದಿಸಿರುತ್ತಾನೆ. ಈ ಎಲ್ಲ ವಸ್ತುಗಳು ಈಗ ಎದುರುದಾರನ ತಂಗಿ ಗಂಡನ ಮನೆಯಲ್ಲಿ ಇರುತ್ತವೆ. ಆ ಸಾಮಾನುಗಳನ್ನು ಮರಳಿ ಕೊಡಲು ನಾನು ಕೇಳಿದೆ. ಅದಕ್ಕೆ ಎದುರುದಾರ ತನ್ನ ತಂಗಿಯ ಮನೆಗೆ ಕೊಟ್ಟಿದ್ದು ಮರಳಿ ಕೊಡುವುದಿಲ್ಲ ನೀನು ಏನು ಮಾಡಿಕೊಳ್ಳುತ್ತೀಯ ಮಾಡಿಕೋ ಎಂದು ಹೇಳಿದ. ಆ ರೀತಿಯಾಗಿ ಎದುರುದಾರನ ತಾಯಿ, ತಂಗಿ ಮತ್ತು ತಂಗಿಯ ಗಂಡ ಹೇಳಿದ. ಆ ರೀತಿಯಾಗಿ ಹೇಳಿ ಬಾಡಿಗೆ ಮನೆಯಿಂದ ನನ್ನನ್ನು ಹೊಡೆಬಡೆ ಮಾಡಿ ಮನೆಯಿಂದ ಹೊರಗೆ ಹಾಕಿರುತ್ತಾರೆ. ಈಗ ಕಳೆದ 9 ತಿಂಗಳಿನಿಂದ ನಾನು ನನ್ನ ತವರು ಮನೆಯಲ್ಲಿ ವಾಸವಾಗಿರುತ್ತೇನೆ.

ಅಂಜುಮನ್ ಕಮಿಟಿಯಲ್ಲಿ ಎದುರುದಾರ ಮತ್ತು ಆತನ ಸಂಬಂಧಿಕರು ಬಂದಿದ್ದರು ಅಲ್ಲಿ ಆತನಿಗೆ ಬುದ್ಧಿಮಾತು ಹೇಳಿದ್ದರು. ಅಲ್ಲಿ ಬುದ್ಧಿವಾದ ಹೇಳಿದ್ದರೂ ಕೂಡ ನನ್ನ ಗಂಡ ಸಂಸಾರ ಮಾಡಲು ಕರೆದುಕೊಂಡು ಹೋಗಲು ಬಂದಿಲ್ಲ. ನಂತರ ನಾನು ನನ್ನ ವಕೀಲರ ಮೂಲಕ ಕಾನೂನು ತಿಳುವಳಿಕೆ ನೊಟೀಸ್ ಕೊಟ್ಟಿರುತ್ತೇನೆ. ಸದ್ರಿ ನೊಟೀಸ್ ಜಾರಿಯಾಗಿದ್ದು ಅದಕ್ಕೆ ಯಾವುದೇ ರೀತಿಯ ಉತ್ತರ ಕೊಟ್ಟಿದ್ದು ಇರುವುದಿಲ್ಲ. ನನಗೆ

ಮತ್ತು ನನ್ನ ಮಕ್ಕಳಿಗೆ ತಿಂಗಳಿಗೆ ತಲಾ ರೂ.10 ಸಾವಿರ ರಂತೆ ರೂ.40 ಸಾವಿರ ಹಣವನ್ನು ಜೀವನಾಂಶ ಅಂತ ಕೊಡಲು ವಿನಂತಿ ಅದೆ. ಸದ್ರಿ ನಾನು ಕೆಲವು ದಾಖಲೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಗುರುತಿಸಲು ವಿನಂತಿ ಅದೆ.

1. ಮದುವೆ ಆಮಂತ್ರಣ ಪತ್ರಿಕೆಯನ್ನು ನಿಪಿ-1 ಎಂದು ಗುರುತಿಸಲಾಯಿತು.

ಮುಂದುವರಿದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿದ್ದು ಕೋರಿಕೆ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

**(ಓ.ಹೇ.ಕೇ.ಸ.)**

**2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು**
**ಮತ್ತು ಜೆಎಂಎಫ್‌ಸಿ, ರಾಣೆಬೆನ್ನೂರು.**

**ಸಾಕ್ಷಿದಾರರ ಸಹಿಃ**